ಕರಡು

# ದಿನಾಂಕ: 22.09.2014ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ -2013 ರ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳು / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್‌ನ ಮೊದಲನೇ ಸಭೆಯ ನಡವಳಿಗಳು

ಸ್ಥಳ: 3ನೇ ಮಹಡಿ, ಸಮ್ಮೇಳನ ಸಭಾಂಗಣ
ವಿಧಾನಸೌಧ, ಬೆಂಗಳೂರು

ಸಮಯ ಬೆಳಿಗ್ಗೆ 11.00 ಗಂಟೆ

**ಸಭೆಗೆ ಹಾಜರಾದ ಪದನಿಮಿತ್ತ ಸದಸ್ಯರುಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ರವರ ಪಟ್ಟಿ ಲಗತ್ತಿಸಿದೆ.**

ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಸಭೆಗೆ ಹಾಜರಾದ **ರಾಜ್ಯ ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್‌ನ** ಅಧ್ಯಕ್ಷರಾದ ಸನ್ಮಾನ್ಯ ಮುಖ್ಯಮಂತ್ರಿಗಳು, **ನೋಡಲ್ ಏಜೆನ್ಸಿ** ಅಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು, ಕಾನೂನು, ಸಂಸದೀಯ ವ್ಯವಹಾರ, ಪಶುಸಂಗೋಪನಾ ಹಾಗೂ ಮುಜರಾಯಿ ಇಲಾಖಾ ಸಚಿವರು, ನಾಮನಿರ್ದೇಶಿತ ಸದಸ್ಯರುಗಳನ್ನು ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳನ್ನು ಸ್ವಾಗತಿಸಿ ಮಾನ್ಯ ಮುಖ್ಯ ಮಂತ್ರಿಗಳು ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ 5 ಮತ್ತು 6ನೇ ಪಂಚವಾರ್ಷಿಕ ಯೋಜನೆಗಳಿಂದಲೂ SCP & TSP ಉಪ ಯೋಜನೆಗಳಡಿಯಲ್ಲಿ ಅನುದಾನ ಒದಗಿಸಿಕೊಂಡು, ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದು ತಿಳಿಸಿದರು. ಈ ಉಪಯೋಜನೆಗಳ ಮುಖ್ಯ ಉದ್ದೇಶ ಅಭಿವೃದ್ಧಿಯಲ್ಲಿ ಸಾಮಾನ್ಯ ಜನರಿಗೂ ಮತ್ತು ಪಜಾ/ಪ.ಪಂ.ದ ಜನರಿಗೂ ಇರುವ ಅಂತರವನ್ನು (ಸಾಮಾಜಿಕ, ಆರ್ಥಿಕ & ಶೈಕ್ಷಣಿಕ, ಆರೋಗ್ಯ, ಮೂಲಭೂತ ಸೌಕರ್ಯಗಳು ಕೌಶಲ್ಯ ಅಭಿವೃದ್ಧಿ ಮತ್ತು ಇತ್ಯಾದಿಗಳ)ಕಡಿಮೆ ಮಾಡುವುದು ಹಾಗೂ ಈ ಯೋಜನೆಗಳಡಿ ಅನುದಾನವನ್ನು ಮೀಸಲಿರಿಸಿ ಈ ಜನಾಂಗದವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವುದಾಗಿರುತ್ತದೆ.

ಈವರೆಗೂ ಈ ಉಪಯೋಜನೆಗಳ ಅನುಷ್ಠಾನದ ಬಗ್ಗೆ ಯಾವುದೇ ಮೌಲ್ಯಮಾಪನ ಮಾಡಿರುವುದಿಲ್ಲದ ಕಾರಣ ಈ ಜನಾಂಗದವರು ಎಷ್ಟರಮಟ್ಟಿಗೆ ಅಭಿವೃದ್ಧಿ ಹೊಂದಿದ್ದಾರೆ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸದರಿ ಉಪ ಯೋಜನೆಗಳ ಅನುಷ್ಠಾನದ ಬಗ್ಗೆ ವಿಶೇಷ ಒತ್ತನ್ನು ನೀಡಲು ಸರ್ಕಾರವು 2013 ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಬೆಳಗಾಂವಲ್ಲಿ ನಡೆದ ಶಾಸನಸಭಾ ಅಧಿವೇಶನದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ/ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ಅನ್ನು

ಮಂಡಿಸಿ, ಅನುಮೋದನೆ ಪಡೆದು, ದಿನಾಂಕ: 20.03.2014 ರಿಂದ ಅಧಿನಿಯಮವನ್ನು ಜಾರಿಗೆ ತಂದಿರುತ್ತದೆ. ಕಾಯಿದೆ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳು / ಅನುಸೂಚಿತ ಪಂಗಡಗಳು ಅಭಿವೃದ್ಧಿ ಪರಿಷತ್‌ನ ಮೊದಲನೇ ಸಭೆಯನ್ನು ನಡೆಸಲು ನಾವೆಲ್ಲಾ ಇಲ್ಲಿ ಸೇರಿದ್ದೇವೆ. ತಮ್ಮೆಲ್ಲರನ್ನೂ ಈ ಸಭೆಗೆ ಮತ್ತೊಮ್ಮೆ ಹಾರ್ದಿಕವಾಗಿ ಸ್ವಾಗತಿಸುತ್ತಿದ್ದೇನೆ ಎಂಬುದಾಗಿ ತಿಳಿಸಿದರು.

ರಾಷ್ಟ್ರದಲ್ಲಿ ಈ ರೀತಿಯ ಕಾಯ್ದೆಯನ್ನು ಜಾರಿಗೆ ತಂದಿರುವ ಆಂಧ್ರ ಪ್ರದೇಶ ರಾಜ್ಯವು ಪ್ರಥಮ ರಾಜ್ಯವಾಗಿದ್ದು, ಕರ್ನಾಟಕವು ಎರಡನೇ ರಾಜ್ಯವಾಗಿರುತ್ತದೆ.

ಹಿಂದಿನ ವರ್ಷಗಳಲ್ಲಿ ಈ ಉಪಯೋಜನೆಗಳಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಶೇಕಡಕ್ಕೆ ಅನುಗುಣವಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. 2013-14ನೇ ಸಾಲಿನಲ್ಲಿ ಈ ಉಪಯೋಜನೆಗಳಡಿ ಒಟ್ಟು ರೂ 8616.29 ಕೋಟಿಗಳನ್ನು ಒದಗಿಸಲಾಗಿದೆ(ಪಜಾಉಯೋ: ರೂ 6135.56ಕೋಟಿ + ಪಪಂಉಯೋ: ರೂ 2480.73 ಕೋಟಿಗಳು). ಈ ಕಾಯ್ದೆಯು ಜಾರಿಗೆ ಬಂದ ನಂತರ 2014-15ನೇ ಸಾಲಿನಲ್ಲಿ 2011ನೇ ಜನಗಣತಿಯನ್ನು ಆಧರಿಸಿ ಪ.ಜಾತಿ17.15% / ಪ.ಪಂಗಡಗಳ ಜನಸಂಖ್ಯೆ 6.95% ಯ ಪ್ರಮಾಣಕ್ಕೆ ಅನುಸಾರವಾಗಿ ರಾಜ್ಯ ಯೋಜನಾ ಗಾತ್ರದಲ್ಲಿ ಶೇ.24.10 ವನ್ನು ಅಂದರೆ ರೂ 15,831.16 ಕೋಟಿಗಳನ್ನು ಮೀಸಲಿಡಲಾಗಿದೆ. (ಪಜಾಉಯೋ: ರೂ 11,518.98ಕೋಟಿ + ಪಪಂಉಯೋ ರೂ 4,315.18 ಕೋಟಿ). ಈ ಉಪಯೋಜನೆಗಳಡಿ ಕಳೆದ ಸಾಲಿಗಿಂತ ಪ್ರಸ್ತುತ ಸಾಲಿನಲ್ಲಿ ಎರಡು ಪಟ್ಟು ಹೆಚ್ಚು ಅನುದಾನವನ್ನು ಒದಗಿಸಲಾಗಿದೆ. ಇದರಿಂದ ನನ್ನ ಕಳಕಳಿ ಏನೆಂದರೆ ಈ ಅನುದಾನವನ್ನು ಸಂಪೂರ್ಣವಾಗಿ ಈ ಜನಾಂಗದವರ ಅಭಿವೃದ್ಧಿಗಾಗಿ ಉಪಯೋಗ ಮಾಡಿಕೊಳ್ಳಬೇಕು.

ಕಳೆದ ಸಾಲುಗಳಲ್ಲಿ ಈ ಉಪಯೋಜನೆಗಳಡಿಯಲ್ಲಿ ಅನುದಾನವನ್ನು ನಿಗದಿತ ಕಾರ್ಯಕ್ರಮಗಳಿಗೆ ಖರ್ಚು ಮಾಡದೆ ವ್ಯಪಗತ ಆಗಿರುತ್ತದೆ. ಆದರೆ ಈ ಕಾಯ್ದೆಯಲ್ಲಿ ಅನುದಾನವನ್ನು ಆಯಾ ಆರ್ಥಿಕ ವರ್ಷದಲ್ಲಿಯೇ ಖರ್ಚು ಮಾಡಬೇಕು, ಒಂದು ವೇಳೆ ಅನಿವಾರ್ಯ ಸನ್ನಿವೇಶಗಳಲ್ಲಿ ಖರ್ಚಾಗದೆ ಉಳಿಯುವ ಅನುದಾನವನ್ನು ಮುಂದಿನ ಹಣಕಾಸು ವರ್ಷದಲ್ಲಿ ವೆಚ್ಚ ಭರಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ನಿಗಧಿಪಡಿಸಿ ಬಿಡುಗಡೆ ಮಾಡಿದ ಅನುದಾನ ವ್ಯಪಗತ ಮಾಡಲು ಸಾಧ್ಯವಿಲ್ಲ ಹಾಗೂ ಈ ಕಾಯ್ದೆಯನ್ವಯ ಪ್ರಶಂಸಾರ್ಹವಾದ ಕಾರ್ಯ ಸಾಧನೆಗೆ ಅನುಷ್ಠಾನಾಧಿಕಾರಿಗಳಿಗೆ ಪ್ರೋತ್ಸಾಹಧನವನ್ನು ಹಾಗೂ ಕರ್ತವ್ಯ ನಿರ್ಲಕ್ಷ್ಯತೆಗೆ ಶಿಸ್ತಿನ ಕ್ರಮ ಹಾಗೂ ದಂಡನೆಯನ್ನು ಸಹ ವಿಧಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಆದ್ದರಿಂದ ಅಧಿಕಾರಿಗಳು ನಿಷ್ಠೆಯಿಂದ, ಕಾಯ್ದೆಯ ಪ್ರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದರು.

ಪ್ರಸಕ್ತ ಸಾಲಿನಲ್ಲಿ ಒಟ್ಟು 32 ಇಲಾಖೆಗಳಿಗೆ SCSP ಮತ್ತು TSP ಉಪ ಯೋಜನೆಗಳಡಿಯಲ್ಲಿ ವಿವಿಧ ಕಾರ್ಯಕ್ರಮಗಳಿಗೆ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ. ಕಾಯ್ದೆಯನ್ವಯ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೋಡಲ್ ಏಜೆನ್ಸಿಯು ವಿವಿಧ ಅಭಿವೃದ್ಧಿ ಇಲಾಖೆಗಳು ಸಲ್ಲಿಸಿದ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ ಅನುಮೋದನೆ ಮಾಡಲು ಶಿಫಾರಸ್ಸು ಮಾಡಲಾಗಿದೆ. ಈ ವಿಷಯದ ಬಗ್ಗೆ ಅಭಿವೃದ್ಧಿ ಪರಿಷತ್‌ನ ಪದನಿಮಿತ್ತ ಸದಸ್ಯರುಗಳ ಅಮೂಲ್ಯ ಅಭಿಪ್ರಾಯವನ್ನು ತಿಳಿಸುವಂತೆ ಕೋರಿದರು.

ಸಮಿತಿಯ ನಾಮನಿರ್ದೇಶಿತ ಸದಸ್ಯರು ಹಾಗೂ ಮಾನ್ಯ ಲೋಕಸಭಾ ಸದಸ್ಯರಾದ **ಶ್ರೀ.ಆರ್.ಧ್ರುವನಾರಾಯಣ** ರವರು ಈ ಐತಿಹಾಸಿಕ ಕಾಯ್ದೆಯನ್ನು ಜಾರಿಗೆ ತಂದ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದರು. ಈ ದಿನ ಸಭೆಗೆ ಮಂಡಿಸಿರುವ ವಿವಿಧ ಅಭಿವೃದ್ಧಿ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ವೀಕ್ಷಿಸಿದಾಗ ಇಲಾಖೆಗಳ ಕ್ರಿಯಾ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನರಿಗೆ ನೇರವಾಗಿ ಪ್ರಯೋಜನವಾಗುವ ಕಾರ್ಯಕ್ರಮಗಳು ಹೆಚ್ಚಿನ ಪ್ರಮಾಣದಲ್ಲಿರುವುದಿಲ್ಲ. ಉದಾಹರಣೆಗೆ

ಲೋಕೋಪಯೋಗಿ ಇಲಾಖೆಯಡಿಯಲ್ಲಿ ನ್ಯಾಯಾಲಯ ಕಟ್ಟಡಗಳ ನಿರ್ಮಾಣ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ಮಾಣಕ್ಕಾಗಿ ಬಹುತೇಕ ಅನುದಾನವನ್ನು ಎಲ್ಲಾ ಜನಾಂಗದವರಿಗೂ ಉಪಯುಕ್ತವಾಗುವ ಕಾರ್ಯಕ್ರಮಗಳಿಗೆ ಈ ಉಪಯೋಜನೆಗಳಡಿ ಒದಗಿಸಿರುವುದು ಕಂಡು ಬಂದಿರುತ್ತದೆ. ಇದರಿಂದ ಪ.ಜಾತಿ / ಪ.ಪಂಗಡದ ಜನಾಂಗದವರಿಗೆ ಎಷ್ಟರಮಟ್ಟಿಗೆ ಉಪಯುಕ್ತವಾಗುತ್ತದೆ ಎಂಬುದು ತಿಳಿದುಬರುವುದಿಲ್ಲ.

ಅದೇ ರೀತಿ ಗ್ರಾಮೀಣ & ಪಂಚಾಯತ್‌ರಾಜ್ ಇಲಾಖೆಯಡಿಯಲ್ಲಿ ಗ್ರಾಮೀಣ ನೀರು ಸರಬರಾಜು, ಪಿಎಂಜಿಎಸ್‌ವೈ ರಸ್ತೆ ನಿರ್ವಹಣೆ, ಗ್ರಾಮ ಪಂಚಾಯತ್‌ಗಳಲ್ಲಿರುವ ರಸ್ತೆಗಳಿಗೆ ಹೆಚ್ಚಿನ ಅನುದಾನ ಒದಗಿಸಲಾಗಿದೆ. ಹಾಗೆಯೇ ವಿವಿಧ ಇಲಾಖೆಗಳಲ್ಲಿಯೂ ಸಹ ಈ ನ್ಯೂನತೆಗಳು ಇರುವುದು ಕಂಡು ಬಂದಿರುತ್ತದೆ.

ಆದ್ದರಿಂದ ಎಲ್ಲಾ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಮತ್ತೊಮ್ಮೆ ಪರಿಶೀಲಿಸಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಜನರಿಗೆ ನೇರವಾಗಿ ಉಪಯುಕ್ತವಾಗುವ ಕಾರ್ಯಕ್ರಮಗಳಿಗೆ ಮಾತ್ರ ಒತ್ತುನೀಡುವುದು ಅವಶ್ಯಕವಾಗಿರುವುದರಿಂದ ಈ ಕ್ರಿಯಾ ಯೋಜನೆಗಳನ್ನು ಅನುಮೋದಿಸದೆ, ಮತ್ತೊಮ್ಮೆ ಇಲಾಖೆಗಳು ತಮ್ಮ ಕ್ರಿಯಾ ಯೋಜನೆಯನ್ನು ಕಾಯ್ದೆಯನ್ವಯ ಪರಿಷ್ಕರಿಸಿ ಅನುಮೋದನೆ ಪಡೆಯುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇದಲ್ಲದೆ ಪ್ರತಿ ಜಿಲ್ಲೆಯಲ್ಲೂ ಪಜಾಉಯೋ/ ಗಿಉಯೋ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಮೇಲ್ವಿಚಾರಣೆಗಾಗಿ ಒಂಬುಡ್ಸ್‌ಮನ್ ಗಳನ್ನು ನೇಮಿಸಬೇಕು. ಮಹಾರಾಷ್ಟ್ರ ಮಾದರಿಯಲ್ಲಿ ಏಕಗವಾಕ್ಷಿ ಪದ್ಧತಿಯನ್ನು ಅಳವಡಿಸಲು ಸಲಹೆ ನೀಡಿದರು. ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಜನರಿಗೆ ನೇರವಾಗಿ ತಲುಪುವ ವಸತಿ. ಶಿಕ್ಷಣ, ಆರೋಗ್ಯ, ಸ್ವಯಂ ಉದ್ಯೋಗ ಇತ್ಯಾದಿ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನವನ್ನು ಮೀಸಲಿಡಬೇಕು ಎಂದು ಕೋರಿದರು.

ನಾಮನಿರ್ದೇಶಿತ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರಾದ **ಶ್ರೀ.ಗೋವಿಂದ ಎಂ.ಕಾರಜೋಳ** ರವರು ಮಾತನಾಡಿ ಸದರಿ ಕಾಯ್ದೆಯನ್ನು ಜಾರಿಗೆ ತಂದ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿ, ಪಜಾಉಯೋ/ಗಿಉಯೋ ಯಡಿ ಲಭ್ಯವಿರುವ ಅನುದಾನವನ್ನು ಉದ್ಯೋಗ ಮತ್ತು ತರಬೇತಿ ಹಾಗೂ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಿ ಉಪಯೋಗಿಸುವಂತೆ ಕೋರಿದರು. ತರಬೇತಿಗಳಲ್ಲಿ ಮುಖ್ಯವಾಗಿ ನರ್ಸಿಂಗ್/ ಪ್ಯಾರಾಮೆಡಿಕಲ್ ಕೋರ್ಸ್‌ಗಳು/ ಪ್ಲಾಸ್ಟಿಕ್ ಟೆಕ್ನಾಲಜಿ/ ಫ್ಯಾಷನ್ ಟೆಕ್ನಾಲಜಿ/ ಲೆದರ್ ಟೆಕ್ನಾಲಜಿ/ ಫೋಟೋಗ್ರಫಿ/ ಫೈರ್ & ಸೇಫ್ಟಿ/ ಹೈನುಗಾರಿಕೆ ಮತ್ತು ವಿವಿಧ ವೃತ್ತಿಗಳಲ್ಲಿ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಿದಲ್ಲಿ ಉದ್ಯೋಗ ಮತ್ತು ಸ್ವಯಂಉದ್ಯೋಗ ಹೊಂದಿ ಸ್ವಾವಲಂಬಿಗಳಾಗಲು ಅವಕಾಶವಾಗುತ್ತದೆ. ಇದರಿಂದ ಸದರಿ ಜನಾಂಗದ ಮಾನವ ಸಂಪನ್ಮೂಲವು ಪರಿಣಾಮಕಾರಿಯಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ.

ಕೃಷಿ ಇಲಾಖೆಯಲ್ಲಿ ರೈತರಿಗೆ ಉಪಕರಣಗಳನ್ನು ನೀಡುವ ಕಾರ್ಯಕ್ರಮದಿಂದ ಹೆಚ್ಚಿನ ಪ್ರಯೋಜನ ಆಗದಿರುವುದರಿಂದ ಕೇವಲ ಬೀಜಗಳ ವಿತರಣೆ, ರಸಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಮಾತ್ರ ಒದಗಿಸಿದರೆ ಉಪಯೋಗವಾಗುತ್ತದೆ. ಇದರೊಂದಿಗೆ ಭೂರಹಿತ ಪಜಾತಿ/ ಪಪಂಗಡದ ಕೃಷಿ ಕಾರ್ಮಿಕರಿಗೆ ಭೂ ಖರೀದಿ ಯೋಜನೆಯಡಿ ಹೆಚ್ಚಿನ ಅನುದಾನವನ್ನು ಮೀಸಲಿಡಬೇಕು ಹಾಗೂ ಈ ಬಗ್ಗೆ ಹಾಲಿ ಇರುವ ಘಟಕ ವೆಚ್ಚವನ್ನು ರೂ 10.00 ಲಕ್ಷದಿಂದ ರೂ 12.00 ಲಕ್ಷಕ್ಕೆ ಹೆಚ್ಚಿಸಬೇಕೆಂದು ಹಾಗೂ ಪ್ರಸ್ತುತ ವರ್ಷದಲ್ಲಿ ಈ ಯೋಜನೆಗೆ ರೂ

2000.00 ಕೋಟಿಗಳನ್ನು ಒದಗಿಸಬೇಕೆಂದು ಕೋರಿದರು ಮತ್ತು ಪ.ಜಾತಿ/ ಪ.ಪಂಗಡದವರಿಗೆ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಹೆಚ್ಚಿನ ಸಂಖ್ಯೆಯಲ್ಲಿ ವಸತಿ ಶಾಲೆಗಳು ಮತ್ತು ವಸತಿನಿಲಯಗಳು ಪ್ರತ್ಯೇಕವಾಗಿ ಕಾಲೇಜು ವಿದ್ಯಾರ್ಥಿ ನಿಲಯಗಳು ಅದರಲ್ಲಿಯೂ ಹೆಣ್ಣು ಮಕ್ಕಳಿಗೆ ವಿಶೇಷ ಆದ್ಯತೆ ನೀಡಿ ಪ್ರಾರಂಭಿಸಲು ಹಾಗೂ ಸ್ವಂತ ಕಟ್ಟಡಗಳನ್ನು ಹೊಂದುವಂತೆ ಮಾಡಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಿತಿಯ ನಾಮನಿರ್ದೇಶಿತ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರಾದ **ಶ್ರೀ.ಕೆ.ಎನ್.ರಾಜಣ್ಣ** ರವರು ಸಹ ಸದರಿ ಕಾಯ್ದೆಯನ್ನು ಜಾರಿಗೆ ತಂದ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿ, 2013-14ರಲ್ಲಿ ಈ ಉಪಯೋಜನೆಗಳಡಿ ಒಟ್ಟಾರೆ ಸುಮಾರು ರೂ 8616.29 ಕೋಟಿಗಳನ್ನು ಒದಗಿಸಿದ್ದು, ಈ ಪೈಕಿ ರೂ. 7450.00 ಕೋಟಿ ಬಿಡುಗಡೆಯಾಗಿದ್ದು, ರೂ. 7204.00 ಕೋಟಿಗಳು ಮಾತ್ರ ಖರ್ಚು ಮಾಡಲಾಗಿರುತ್ತದೆ. ಸಂಪೂರ್ಣ ಮೊತ್ತವನ್ನು ಉಪಯೋಗಿಸದಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಮೌಲ್ಯಮಾಪನವನ್ನು ಮಾಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

2014-15ನೇ ಸಾಲಿನ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಲಾಗಿ ವಿವಿಧ ಇಲಾಖೆಗಳಿಗೆ ಅನುದಾನವನ್ನು ಒದಗಿಸಿದ್ದು, ಆದರೆ ಒದಗಿಸಿದ ಅನುದಾನಕ್ಕೆ ಹೆಚ್ಚಿನ ಸಂಖ್ಯೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುದಾನವನ್ನು ಮರುಹಂಚಿಕೆ ಮಾಡಲಾಗಿದೆ. ಈ ಜನಾಂಗಗಳ ಅವಶ್ಯಕತೆಗಳಿಗನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆಂದು ಆಕ್ಷೇಪವನ್ನು ವ್ಯಕ್ತಪಡಿಸಿದರು ಹಾಗೂ ಕಾಯ್ದೆಯ ಸೆಕ್ಷನ್ 15ರಂತೆ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಜನರ ವಾಸಸ್ಥಳಗಳಿಗೆ ಅಥವಾ ಬುಡಕಟ್ಟು ಪ್ರದೇಶಗಳಿಗೆ ನೇರ ಮತ್ತು ಪ್ರಮಾಣ ನಿರ್ಧರಿಸಬಹುದಾದ ಪ್ರಯೋಜನ ಒದಗಿಸುವಂತಹ ಮತ್ತು ಅಭಿವೃದ್ಧಿಯಲ್ಲಿನ ಅಂತರಗಳನ್ನು ತುಂಬಲು ಸಾಧ್ಯಗೊಳಿಸುವಂತಹ ಕಾರ್ಯಕ್ರಮಗಳನ್ನು ಮಾತ್ರ ರೂಪಿಸುವಂತೆ ಸಲಹೆ ನೀಡಿದರು.

ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಪೋಷಕರ ಮಕ್ಕಳಿಗೆ ಪ್ರತಿ ಜಿಲ್ಲೆಯಲ್ಲಿಯೂ ವಸತಿ ಶಾಲೆಗಳನ್ನು ತೆರೆದು ಪ್ರಾಥಮಿಕ ಹಂತದಿಂದ ಪದವಿ ಹಂತದವರೆಗೆ ಉಚಿತ ವಿದ್ಯಾಭ್ಯಾಸವನ್ನು ಒದಗಿಸುವ ಕಾರ್ಯಕ್ರಮವನ್ನು ರೂಪಿಸಲು ಸಲಹೆ ನೀಡಿದರು.

ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಜನರಿಗೆ ಭೂಮಿಯನ್ನು ಒದಗಿಸುವ ಭೂ ಖರೀದಿ ಯೋಜನೆಗೆ ಹೆಚ್ಚಿನ ಅನುದಾನವನ್ನು ನಿಗದಿಪಡಿಸಬೇಕು ಹಾಗೂ ಘಟಕ ವೆಚ್ಚವನ್ನು ಜಿಲ್ಲಾವಾರು ಪ್ರತ್ಯೇಕವಾಗಿ ಅಲ್ಲಿನ ಮಾರ್ಗದರ್ಶಿದರ/ಮಾರುಕಟ್ಟೆ ದರವನ್ನು ಅನುಸರಿಸಿ ನಿಗದಿಪಡಿಸಲು ಸಲಹೆ ನೀಡಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಮತ್ತು ಪಶುಸಂಗೋಪನಾ ಇಲಾಖಾ ಸಚಿವರು ವಿವಿಧ ಅಭಿವೃದ್ಧಿ ಇಲಾಖೆಗಳು ಈ ಉಪಯೋಜನೆಗಳಡಿಯಲ್ಲಿ ನಿಗದಿಪಡಿಸಿದ ಮೊತ್ತಕ್ಕೆ ಕಾರ್ಯಕ್ರಮಗಳನ್ನು ರೂಪಿಸುವಾಗ ನೋಡಲ್ ಇಲಾಖೆಯವರೊಂದಿಗೆ ಚರ್ಚಿಸಬೇಕಾಗಿರುತ್ತದೆ. ನಂತರ ಸಂಬಂಧಪಟ್ಟ ಇಲಾಖೆಗಳು ಕ್ರಿಯಾ ಯೋಜನೆಯನ್ನು ತಯಾರಿಸಿ, ನೋಡಲ್ ಏಜೆನ್ಸಿ ಸಮಿತಿ ಸಭೆಗೆ ಮಂಡಿಸಿ ಪರಿಶೀಲಿಸಿ, ರಾಜ್ಯ ಅಭಿವೃದ್ಧಿ ಪರಿಷತ್‌ಗೆ ಅಂತಿಮ ಅನುಮೋದನೆಗಾಗಿ ಸಲ್ಲಿಸಬೇಕಾಗುತ್ತದೆ. ತದನಂತರ ಸದರಿ ಉಪಯೋಜನೆಗಳಡಿ ಒದಗಿಸಿದ ಅನುದಾನವನ್ನು ಶಾಸನಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಅನುಷ್ಠಾನ ಮಾಡಬೇಕಾಗಿರುತ್ತದೆ. ಆದರೆ, ಕಾಯ್ದೆಗೆ ಅನುಗುಣವಾಗಿ ಪ್ರಕ್ರಿಯೆಗಳನ್ನು ಪಾಲಿಸಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಯ್ದೆಯ ಸೆಕ್ಷನ್ 20ರಂತೆ ಕ್ರಿಯಾಯೋಜನೆಗಳನ್ನು ರೂಪಿಸಿರುವುದಿಲ್ಲ ಹಾಗೂ ಸೆಕ್ಷನ್ 21ರಂತೆ ಆರ್ಥಿಕ-ಇಲಾಖೆಯಲ್ಲಿ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ ಬಗ್ಗೆ ಪ್ರತ್ಯೇಕ ಕೋಶವನ್ನು ತೆರೆದಿಲ್ಲವೆಂದು ತಿಳಿಸಿದರು ಹಾಗೂ ಯೋಜನೆ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಈ ಉಪಯೋಜನೆಗಳಡಿಯಲ್ಲಿ ಅನುದಾನವನ್ನು ವಿವಿಧ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡುವಾಗ ಹೆಚ್ಚಿನ ಗಮನಹರಿಸಿ ಈ ಜನಾಂಗದ ಅಭಿವೃದ್ಧಿಗೆ ಅವಶ್ಯವಿರುವ ಕಾರ್ಯಕ್ರಮಗಳಿಗೆ ಆದ್ಯತೆ ಮೇರೆಗೆ ಅನುದಾನ ಹಂಚಿಕೆ ಮಾಡುವ ಪದ್ಧತಿಯನ್ನು ಅಳವಡಿಸಬೇಕೆಂದು ಸಲಹೆ ನೀಡಿದರು.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳಲ್ಲಿ ಈ ಎರಡು ಉಪಯೋಜನೆಯಡಿ 25 ಮತ್ತು 9 ಕಾರ್ಯಕ್ರಮಗಳು ಒಟ್ಟು 34 ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆ ಮಾಡಿರುತ್ತಾರೆ. ಈ ವಲಯದಲ್ಲಿ ಈ ಜನಾಂಗದವರನ್ನು ಅಭಿವೃದ್ಧಿಪಡಿಸಲು ಇಷ್ಟು ಕಾರ್ಯಕ್ರಮಗಳ ಅವಶ್ಯಕತೆಯಿರುವ ಬಗ್ಗೆ ಪ್ರಶ್ನಿಸಿದರು. ಇದಲ್ಲದೆ ಪ.ಜಾತಿ / ಪ.ಪಂಗಡದ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹಧನ ಯೋಜನೆಯಡಿ 201.00 ಕೋಟಿ ಒದಗಿಸಿದ್ದು, ಇಷ್ಟು ಅನುದಾನ ಈ ಕಾರ್ಯಕ್ರಮಕ್ಕೆ ಅವಶ್ಯವಿಲ್ಲವೆಂದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖಾ ಸಚಿವರೊಡನೆ ಸಮಾಲೋಚನೆ ಮಾಡಿ ಈ ಕಾರ್ಯಕ್ರಮದಡಿಯಲ್ಲಿ ಉಳಿಕೆಯಾಗುವ ಅನುದಾನದಿಂದ ಸುಮಾರು 30 ಸಾವಿರ ಹಾಲು ಕರೆಯುವ ಹಸುಗಳನ್ನು ಪ.ಜಾತಿ/ ಪ.ಪಂಗಡದವರಿಗೆ ವಿತರಿಸುವ ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನ ಮಾಡಲು ಉದ್ದೇಶಿಸಿದೆ ಎಂದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದರು.

ಇದಲ್ಲದೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಭವನ, ಡಾ:ಬಾಬು ಜಗಜೀವನರಾಂ ಭವನ, ಸಮುದಾಯ ಭವನಗಳು, ವಸತಿ ನಿಲಯಗಳು ಇತ್ಯಾದಿಗಳ ನಿರ್ಮಾಣಕ್ಕೆ ಸಾಕಷ್ಟು ಅನುದಾನವು ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಲಭ್ಯವಿದ್ದರೂ, ನಿವೇಶನಗಳು ಲಭ್ಯವಿಲ್ಲದ ಕಾರಣ ಅನುದಾನವನ್ನು ಖರ್ಚುಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ, ಜಿಲ್ಲಾಧಿಕಾರಿಗಳಿಗೆ ತುರ್ತಾಗಿ ಸರ್ಕಾರಿ ನಿವೇಶನಗಳನ್ನು ಒದಗಿಸುವಂತೆ ಸೂಕ್ತ ನಿರ್ದೇಶನ ನೀಡುವಂತೆ ಮುಖ್ಯಮಂತ್ರಿಗಳನ್ನು ಕೋರಿದರು.

ಮಾನ್ಯ ಮುಖ್ಯಮಂತ್ರಿಗಳು ಪದ ನಿಮಿತ್ತ ಸದಸ್ಯರ ಅನಿಸಿಕೆ ಮತ್ತು ದೂರುಗಳನ್ನು ಆಲಿಸಿ ಈ ಗೊಂದಲಗಳ ಕಾರಣಗಳನ್ನು ತಿಳಿಸಲು ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗಳಿಂದ ವಿವರಣೆ ಕೋರಿದರು. ಕಾರ್ಯದರ್ಶಿಗಳು ಈ ಬಗ್ಗೆ ವಿವರಿಸುತ್ತ ಪ್ರಸಕ್ತ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಈ ಉಪಯೋಜನೆಗಳಡಿ ಅನುದಾನವನ್ನು ವಿವಿಧ ಕಾರ್ಯಕ್ರಮಗಳಿಗೆ ಯೋಜನೆ ಇಲಾಖೆ ಮತ್ತು ಆರ್ಥಿಕ ಇಲಾಖೆಗಳು ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸದೆ ಅನುದಾನವನ್ನು ಹಂಚಿಕೆ ಮಾಡಿರುವುದರಿಂದ ಈ ಗೊಂದಲಗಳು ಉದ್ಭವಿಸಿದೆಯೆಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ ಮತ್ತು ಯೋಜನೆ ಇಲಾಖೆಯವರನ್ನು ಈ ನಿಟ್ಟಿನಲ್ಲಿ ಪ್ರಶ್ನಿಸಿದರು. ಇದಕ್ಕೆ ಆರ್ಥಿಕ ಇಲಾಖೆ ಕಾರ್ಯದರ್ಶಿಗಳು ಈ ಸಾಲಿನಲ್ಲಿ ಅಭಿವೃದ್ಧಿ ಇಲಾಖೆಗಳೊಂದಿಗೆ ಅನುದಾನ ಹಂಚಿಕೆ ಮಾಡುವ ಸಭೆಯಲ್ಲಿ ಚರ್ಚಿಸಿದಂತೆ, ಯೋಜನೆ ಇಲಾಖೆಯ ತೀರ್ಮಾನದಂತೆ ಅನುದಾನ ಹಂಚಿಕೆ ಮಾಡಲಾಗಿದೆಯೆಂದು ವಿವರಿಸಿದರು. ಮಾನ್ಯ ಮುಖ್ಯಮಂತ್ರಿಗಳು ಪ್ರಸಕ್ತ ಸಾಲಿನಲ್ಲಿ ಈ ಉಪಯೋಜನೆಯಡಿಯಲ್ಲಿ ಸುಮಾರು 32 ಇಲಾಖೆಗಳಿಗೆ ಆಯವ್ಯಯವನ್ನು ಒದಗಿಸಲು ಏನಾದರೂ ನಿಯಮವಿದೆಯೇ ಎಂಬುದರ ಬಗ್ಗೆ ಸಭೆಯಲ್ಲಿ ಪ್ರಶ್ನಿಸಿದರು. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆರವರು ರಾಜ್ಯದ ಆಯವ್ಯಯದಲ್ಲಿ ರಾಜಸ್ವ (Revenue

Head) ಹಾಗೂ ಬಂಡವಾಳ (Capital Head) ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಅನುದಾನವನ್ನು ವಿವಿಧ ಅಭಿವೃದ್ಧಿ ಇಲಾಖೆಗಳಿಗೆ, ವಿವಿಧ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಬೇಕಾಗಿದೆ. ಅದರಂತೆ ಈ ಉಪಯೋಜನೆಗಳ ಅಡಿಯಲ್ಲಿ ಅಂದಾಜು ರೂ. 10,500.00 ಕೋಟಿಗಳನ್ನು Revenue Head ನಲ್ಲಿ ಮತ್ತು 5,334.00 ಕೋಟಿಗಳನ್ನು Capital Head ನಲ್ಲಿ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಅಭಿವೃದ್ಧಿ ಪರಿಷತ್‌ನ ಪದನಿಮಿತ್ತ ಸದಸ್ಯರುಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರುಗಳು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಿಗಣಿಸಿ, ಸನ್ಮಾನ್ಯ ಮುಖ್ಯ ಮಂತ್ರಿಯವರು ಅಂತಿಮವಾಗಿ ಈ ಕೆಳಕಂಡಂತೆ ತೀರ್ಮಾನಗಳನ್ನು ಪ್ರಕಟಿಸಿದರು.

1. 2014-15 ನೇ ಸಾಲಿನಲ್ಲಿ ಈ ಎರಡು ಉಪಯೋಜನೆಗಳಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳು ನೋಡೆಲ್ ಏಜೆನ್ಸಿ ಮುಖಾಂತರ ಸಲ್ಲಿಸಿದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವುದನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ.

2. ಎಲ್ಲಾ ಅಭಿವೃದ್ಧಿ ಇಲಾಖೆಗಳು ಈಗಾಗಲೆ ಸಲ್ಲಿಸಿದ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಲು ಸೂಚಿಸಿದರು. ಪರಿಷ್ಕರಿಸುವ ಮುನ್ನ ಎಲ್ಲಾ ಇಲಾಖೆಗಳು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ಜನಾಂಗದವರ ಅಭಿವೃದ್ಧಿ ಮಾಡಲು ಅವಶ್ಯಕತೆ ಇರುವ ಕಾರ್ಯಕ್ರಮಗಳನ್ನು ರೂಪಿಸಬೇಕು. ಕಾರ್ಯಕ್ರಮಗಳು ಈ – ಜನಾಂಗದವರಿಗೆ ನೇರವಾಗಿ ಅಥವಾ ಕುಟುಂಬಗಳಿಗೆ ಉಪಯುಕ್ತವಾಗಬೇಕು. ಮತ್ತು ಆ ಜನಾಂಗದವರು ವಾಸಿಸುವ ಸ್ಥಳಗಳಲ್ಲಿ ಅವಶ್ಯವಿರುವ ಮೂಲಭೂತ ಸೌಕರ್ಯ/ ಕಾರ್ಯಕ್ರಮಗಳು ರೂಪಿಸುವುದು.

3. ಅಭಿವೃದ್ಧಿ ಇಲಾಖೆಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಈ ಕೆಳಕಂಡ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.

| | | | |
|---|---|---|---|
| 1 | <u>ಶಿಕ್ಷಣ</u> | :- | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ವಸತಿ ಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ಮಾಣ. |
| 2 | <u>ವಸತಿ</u> | :- | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಪ್ರಸಕ್ತ ಸಾಲಿನಲ್ಲಿ ಒಂದು ಲಕ್ಷ ಮನೆಗಳನ್ನು ಘಟಕ ವೆಚ್ಚ ರೂ. 2.00 ಲಕ್ಷದಲ್ಲಿ ನಿರ್ಮಾಣ ಮತ್ತು ನಿವೇಶನ ರಹಿತರಿಗೆ ನಿವೇಶನ ಒದಗಿಸುವುದು. |
| 3 | <u>ಆರೋಗ್ಯ</u> | :- | ಆರೋಗ್ಯ ಸುಧಾರಣಾ ಕಾರ್ಯಕ್ರಮಗಳು |
| 4 | ಮೂಲ ಭೂತ ಸೌಕರ್ಯಗಳು | :- | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಾಲೋನಿಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಅಂಗನವಾಡಿ ಶಾಲೆ ಪ್ರಾರಂಭ / ಕಟ್ಟಡಗಳ ನಿರ್ಮಾಣ |
| 5 | <u>ನೀರಾವರಿ ಸೌಲಭ್ಯಗಳು ಒದಗಿಸುವುದು</u> | :- | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಜನರಿಗೆ ವೈಯಕ್ತಿಕ ಹಾಗೂ ಗುಂಪುಗಳಿಗೆ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನ. |
| 6 | ಭೂ ಒಡೆತನ | :- | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಭೂ |

| | | | |
|---|---|---|---|
| | ಯೋಜನೆ | | ರಹಿತರಿಗೆ ಭೂ ಒಡೆತನ ಯೋಜನೆಯಡಿ ಜಮೀನು ಖರೀದಿ ಮಾಡಿ ನೀಡುವುದು. |
| 7 | ಉದ್ಯೋಗ | :- | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕ / ಯುವತಿಯರಿಗೆ ಉದ್ಯೋಗ/ ಸ್ವಯಂ ಉದ್ಯೋಗ ಕಲ್ಪಿಸಲು ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |

4. ಮೇಲೆ ನಮೂದಿಸಿರುವ ಕಾರ್ಯಕ್ರಮಗಳನ್ನು ಆದ್ಯತೆಯ ಮೇರೆಗೆ ಎಲ್ಲಾ ಅಭಿವೃದ್ಧಿ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಮತ್ತೊಮ್ಮೆ ಪರಿಷ್ಕರಿಸಿ, ನೋಡಲ್ ಏಜೆನ್ಸಿ ಸಮಿತಿಯಲ್ಲಿ ಚರ್ಚಿಸಿ, ಶಿಫಾರಸ್ಸಿನೊಂದಿಗೆ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಗಾಗಿ 15 ದಿವಸದೊಳಗಾಗಿ ಅಂದರೆ ಅಕ್ಟೋಬರ್ 15 ರೊಳಗೆ ರಾಜ್ಯ ಅಭಿವೃದ್ಧಿ ಪರಿಷತ್‌ನ ಸಭೆಗೆ ಮಂಡಿಸಲು ಸೂಚಿಸಿದರು.

5. ಕೆಲವು ಇಲಾಖೆಗಳಲ್ಲಿ ಮೇಲೆ ವಿವರಿಸಿದ ಕಾರ್ಯಕ್ರಮಗಳನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲದ ಪಕ್ಷದಲ್ಲಿ ಆ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಯಾವ ರೀತಿಯಲ್ಲಿ ಪರಿಷ್ಕರಿಸಿ ಈ ಜನಾಂಗಕ್ಕೆ ಉಪಯೋಗವಾಗುತ್ತಿದೆ ಎಂಬುದರ ಬಗ್ಗೆ ನೋಡೆಲ್ ಏಜೆನ್ಸಿ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಆರ್ಥಿಕ ಇಲಾಖೆಯ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಪರಿಷ್ಕೃತ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವ ತೀರ್ಮಾನವನ್ನು ನೋಡೆಲ್ ಏಜೆನ್ಸಿ ಸಮಿತಿಗೆ ನೀಡಲಾಯಿತು.

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು ಸಭೆಯನ್ನುದ್ದೇಶಿಸಿ ಮಾತನಾಡಿ, ಸನ್ಮಾನ್ಯ ಮುಖ್ಯಮಂತ್ರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಾಂಗದವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಸದ್ದುದ್ದೇಶ ಹಾಗೂ ಕಳಕಳಿ ಇರುವವರಾಗಿದ್ದು, ಈ ಜನಾಂಗದವರ ಸರ್ವತೋಮುಖ ಅಭಿವೃದ್ಧಿ ಹೊಂದಲು ಮುಖ್ಯಮಂತ್ರಿಗಳು ನೀಡಿರುವ ಆದ್ಯತಾ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಿ, ತಮ್ಮ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಿ ನೋಡೆಲ್ ಏಜೆನ್ಸಿ ಸಮಿತಿ ಸಭೆಗೆ ಸಲ್ಲಿಸುವಂತೆ ಸೂಚಿಸಿದರು.

ಮುಂದಿನ ನೋಡೆಲ್ ಏಜೆನ್ಸಿ ಸಭೆಗೆ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಕ್ರಿಯಾಯೋಜನೆಗಳನ್ನು ಅನುಮೋದಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಮಾಹಿತಿಯೊಂದಿಗೆ ಹಾಜರಾಗಲು ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಿದ್ಧರಾಮಯ್ಯ)
ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ ಜಾತಿಗಳು/
ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್